**2019-20 ನೇ ಸಾಲಿನ ಶಿಕ್ಷಣ ಹಕ್ಕು ಕಾಯಿದೆ ಸೆಕ್ಷನ್ 12(1)(ಬಿ) ಮತ್ತು 12(1)(ಸಿ) ಅಡಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಪೋಷಕರಿಗೆ ಸೂಚನೆಗಳು.**

1. ಅರ್ಜಿಯನ್ನು ಭರ್ತಿಮಾಡುವ ಮುನ್ನ ಸೂಚನೆಗಳನ್ನು ತಪ್ಪದೇ ಓದಿಕೊಂಡು ನಂತರ ಅರ್ಜಿ ಭರ್ತಿ ಮಾಡುವುದು.

**2. ಅರ್ಜಿ ಸಲ್ಲಿಸಲು ಬೇಕಾಗುವ ದಾಖಲೆಗಳು:**

1. ಮಗುವಿನ ಭಾವಚಿತ್ರ.(ಆಧಾರ್ ಕಾರ್ಡ್ ಇಲ್ಲದಿದ್ದರೆ)
2. ಆಧಾರ್ ಕಾರ್ಡ್ ಇಲ್ಲದಿದ್ದಲ್ಲಿ ಆಧಾರ್ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸಿರುವ ಸ್ವೀಕೃತಿ ಪತ್ರ.
3. ಮಗುವಿನ ಆಧಾರ್ ಕಾರ್ಡ್.
4. ತಂದೆ ಅಥವಾ ತಾಯಿಯ ಆಧಾರ್ ಕಾರ್ಡ್
5. ಹಿಂದುಳಿದ ವರ್ಗಗಳಾದ್ದಲ್ಲಿ ಜಾತಿ ಮತ್ತು ಆದಾಯದ ಪ್ರಮಾಣಪತ್ರ.
6. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಪ್ರವರ್ಗ–1 ಆಗಿದ್ದಲ್ಲಿ ಜಾತಿ ದೃಢೀಕರಣ ಪತ್ರ.
7. ವಿಶೇಷ ಪ್ರವರ್ಗಗಳ ದೃಢೀಕರಣ ಪತ್ರ.

**3. ಅರ್ಜಿ ಸಲ್ಲಿಸಲು ವಯೋಮಿತಿ:** 01–06–2019 ರಲ್ಲಿ ಇದ್ದಂತೆ;


1. ಎಲ್.ಕೆ.ಜಿ ಗೆ 3 ವರ್ಷ 10 ತಿಂಗಳಿಂದ 4 ವರ್ಷ 10 ತಿಂಗಳು– (1–8–2014 ರಿಂದ 1–8–2015 ರೊಳಗೆ ಜನಿಸಿದ ಮಕ್ಕಳು).
2. 1ನೇ ತರಗತಿಗೆ 5 ವರ್ಷ 10 ತಿಂಗಳಿಂದ 6 ವರ್ಷ 10 ತಿಂಗಳು. (1–8–2012 ರಿಂದ 1–8–2013 ರೊಳಗೆ ಜನಿಸಿದ ಮಕ್ಕಳು).

**4. ಅರ್ಜಿ ಸಲ್ಲಿಸುವಿಕೆ:**


ಅ) ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಥವಾ ಉಪನಿರ್ದೇಶಕರು (ಆಡಳಿತ) ಇವರ ಕಚೇರಿಗಳಲ್ಲಿ ಅರ್ಜಿಯನ್ನು ಉಚಿತವಾಗಿ ಸಲ್ಲಿಸಬಹುದು.

ಆ) ಬೆಂಗಳೂರು – ಒನ್, ಇತರೆ ನಗರ ಪ್ರದೇಶಗಳಲ್ಲಿ ಕರ್ನಾಟಕ –ಒನ್ ಮತ್ತು, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಅಟಲ್‌ಜಿ ಜನಸ್ನೇಹಿ ಕೇಂದ್ರಗಳಲ್ಲಿ ರೂ.15 ಪಾವತಿಸಿ ಅರ್ಜಿ ಸಲ್ಲಿಸಬಹುದು.


5. ಇಲಾಖೆಯ ವೆಬ್‌ಸೈಟ್ www.schooleducation.kar.nic.in ರಲ್ಲಿ ಮಾತ್ರ ಆನ್‌ಲೈನ್ ಅರ್ಜಿ ಸಲ್ಲಿಸುವುದು.
6. ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: **15–04–2019** ಆಗಿರುತ್ತದೆ.
7. ಹೆಚ್ಚಿನ ವಿವರಗಳಿಗೆ –ಟೋಲ್ ಫ್ರೀ ಸಂಖ್ಯೆ: 1800–425–34567 ಮತ್ತು ಟೋಲ್ ಸಹಿತ ಸಂಖ್ಯೆ:080–22484716 ಗೆ ಕರೆ ಮಾಡಿ.





**ಹೋಂ ಪೇಜ್‌ನಲ್ಲಿ RTE-2019 ADMISSION SOFTWARE ಕ್ಲಿಕ್ ಮಾಡಿ ಮುಂದಿನ ಪರದೆ ತೆರೆದುಕೊಳ್ಳುತ್ತದೆ.**





ಎರಡನೇ ಪರದೆಯಲ್ಲಿ ತೋರಿಸಿರುವಂತೆ ಆಧಾರ್ ಕಾರ್ಡ್ ಹೊಂದಿರುವ ಮಗುವಿನ ಆಧಾರ್ ಐಡಿಯನ್ನು Yes ಎಂದು ಕ್ಲಿಕ್ ಮಾಡಿ, ಆಧಾರ್ ಸಂಖ್ಯೆಯನ್ನು ನಮೂದಿಸುವುದು. ಆಧಾರ್ ಕಾರ್ಡ್ ಇಲ್ಲದಿದ್ದರೆ No ಕ್ಲಿಕ್ ಮಾಡಿ ಆಧಾರ್ ನೋಂದಣಿ ಸಂಖ್ಯೆಯನ್ನು ನಮೂದಿಸಿ Proceed ಬಟನ್ ಒತ್ತಿ, ಮುಂದಿನ ಪರದೆ ತೆರೆದು ಕೊಳ್ಳುತ್ತದೆ.





ಮೂರನೇ ಪರದೆಯಲ್ಲಿ ತೋರಿಸಿರುವಂತೆ ಆಧಾರ್ ಧೃಡೀಕರಣಕ್ಕಾಗಿ ಒಪ್ಪಿಗೆ ನೀಡಲು ಬೆರಳಚ್ಚು ಅಥವಾ ಓ.ಟಿ.ಪಿ ಆಯ್ಕೆ ಮಾಡಿ ನಂತರ I agree ಬಟನ್ ಒತ್ತಿ. ನಂತರ ಮುಂದಿನ ಪರದೆ ತೆರೆದುಕೊಳ್ಳುತ್ತದೆ.





ನಾಲ್ಕನೇ ಪರದೆಯಲ್ಲಿ ತೋರಿಸಿರುವಂತೆ ಓ.ಟಿ.ಪಿ ಸಂಖ್ಯೆಯನ್ನು ನಮೂದಿಸಿ ನಂತರ Proceed ಬಟನ್ ಒತ್ತಿ ಮುಂದಿನ ಪರದೆಯಲ್ಲಿ ಮಾಹಿತಿ ಭರ್ತಿ ಮಾಡಿ.




ಐದನೇ ಪರದೆಯಲ್ಲಿ ತೋರಿಸಿರುವಂತೆ ಆಧಾರ್‌ನಲ್ಲಿರುವ ವಿಳಾಸ ತಂತಾನೆ ಮೂಡುತ್ತದೆ. ಬದಲಾವಣೆ ಇದ್ದಲ್ಲಿ ಹಳ್ಳಿ/ವಾರ್ಡ್, (Locality) ಇರುವ ಸ್ಥಳದ ಗುರುತು/ಜನ ವಸತಿ ಪ್ರದೇಶದ ನಿರ್ದಿಷ್ಟ ವಿಳಾಸ ನಮೂದಿಸಿ. ನಂತರ Validate ಬಟನ್ ಒತ್ತಿ. ನಂತರ Proceed ಬಟನ್ ಒತ್ತಿ ಮುಂದಿನ ಪರದೆಯಲ್ಲಿನ ಮಾಹಿತಿಯನ್ನು ಭರ್ತಿ ಮಾಡಿ.




ಆರನೇ ಪರದೆಯಲ್ಲಿ ತೋರಿಸಿರುವಂತೆ ಆಧಾರ್ ಕಾರ್ಡ್ ಹೊಂದಿರುವ ಪೋಷಕರು/ ಪಾಲಕರು ಆಧಾರ್ ಐಡಿಯನ್ನು Yes ಎಂದು ಕ್ಲಿಕ್ ಮಾಡಿ ನಂತರ ನಿಮ್ಮ ಮಗುವಿನೊಂದಿಗೆ ಇರುವ ಸಂಬಂಧದ ಬಗ್ಗೆ ನೀಡಿರುವ ಬಟನ್ ಒತ್ತಿ. ನಂತರ 12 ನಂಬರಿನ ಆಧಾರ್ ಸಂಖ್ಯೆಯನ್ನು ನಮೂದಿಸಿ, ಆಧಾರ್ ಕಾರ್ಡ್ ಇಲ್ಲದ ಪೋಷಕರು/ ಪಾಲಕರು No ಕ್ಲಿಕ್ ಮಾಡಿ ನಂತರ ನಿಮ್ಮ ಮಗುವಿನೊಂದಿಗೆ ಇರುವ ಸಂಬಂಧದ ಬಗ್ಗೆ ನೀಡಿರುವ ಬಟನ್ ಒತ್ತಿ ನಂತರ ಆಧಾರ್ ನೋಂದಣಿ ಸಂಖ್ಯೆಯನ್ನು ನಮೂದಿಸಿ. ನಂತರ Proceed ಬಟನ್ ಒತ್ತಿ ಮುಂದಿನ ಪರದೆಯಲ್ಲಿನ ಮಾಹಿತಿ ಭರ್ತಿ ಮಾಡಲು ಸಾಧ್ಯವಾಗುತ್ತದೆ.




ಏಳನೇ ಪರದೆಯಲ್ಲಿ ತೋರಿಸಿರುವಂತೆ ಮೀಸಲಾತಿಗೆ ಸಂಬಂಧಿಸಿದ ಪ್ರವರ್ಗ ಆಯ್ಕೆ ಮಾಡಿ. ವಿಶೇಷ ಪ್ರವರ್ಗಗಳಿಗೆ ಸೇರಿದ Orphen, Transgender, HIV Infected/Affected, CWSN, ಇತ್ಯಾದಿ ಗುಂಪಿಗೆ ಸೇರಿದ್ದರೆ ಸಂಬಂಧಿಸಿದ ವೀಸಲಾತಿ ಆಯ್ಕೆ ಮಾಡಿಕೊಳ್ಳಿ. ಸಂಬಂಧಿಸಿದ ದಾಖಲೆಯ ಕ್ರಮಸಂಖ್ಯೆ ಮಾಹಿತಿಯನ್ನು ನಮೂದಿಸಿ ಅಲ್ಲದೇ ದಾಖಲೆಯನ್ನು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು. ಇದು ಕಡ್ಡಾಯ.

ಇತರೆ ವರ್ಗಕ್ಕೆ ಸೇರಿದ ಅರ್ಜಿದಾರರು Others ಎಂದು ಆಯ್ಕೆ ಮಾಡಿಕೊಳ್ಳಿ. ಜಾತಿ ಮತ್ತು ಆದಾಯದ ಪ್ರಮಾಣ ಪತ್ರದಲ್ಲಿನ 13 ಸಂಖ್ಯೆಯ ಆರ್.ಡಿ.ಸಂಖ್ಯೆಯನ್ನು ಮಾತ್ರ ನಮೂದಿಸಿ. ಬೇರೆ ಯಾವ ಸಂಖ್ಯೆಯನ್ನು ನಮೂದಿಸಬಾರದು. ನಂತರ ಪಕ್ಕದಲ್ಲಿ ನೀಡಿರುವ Fetch ಬಟನ್ ಒತ್ತಿ. ನಂತರ Proceed ಬಟನ್ ಒತ್ತಿ ಮುಂದಿನ ಪರದೆ ತೆರೆದುಕೊಳ್ಳುತ್ತದೆ.



RTE-2017 | RTE FORM

localhost:50277/schoolregrte_sed_2017/RTE2015/RTEadmit_form.aspx

Total Applications Received as on 1/12/2017 12:51:56 PM ------

APPLICATION FORM

Application Submission Date : 1/12/2017 12:51:56 PM

Select Version : Kannada version | English version

| | |
|---|---|
| Name of the Child | Apoorva Prakash * |
| UID / EID of Child: | 897012123456 |
| Gender | m * |
| Class to be Admitted | --Select-- * |
| Date of Birth | 11/12/2012 12:00:00 AM * |
| Parent / Guardian Name: | 21321 * |
| Parent / Guardian UID or EID: | 1 * |
| Guardian Name : | |
| Parent Present Residential Address | House No/Bldg/Apt: # 102, Haritha Apartments<br>Street/Road/Lane: 11th Cross, 5th Main<br>Area / Locality: MALLESHWARAM<br>Residing Ward / Village name: Dattatreya Temple<br>Educational Block: NORTH2<br>Educational District: Bangalore North<br>Pin Code: 123455 |

12:52 PM 1/12/2017

ಏಂಟನೇ ಪರದೆಯಲ್ಲಿ ತೋರಿಸಿರುವಂತೆ ಕ್ರಮವಾಗಿ ಒಂದರಿಂದ ಏಳನೇ ಪರದೆಗಳಲ್ಲಿ ಅರ್ಜಿದಾರರು ಭರ್ತಿಮಾಡಿದ ವಿವರಗಳನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಪರಿಶೀಲಿಸಿಕೊಳ್ಳಬಹುದು. ಮೊಬೈಲ್ ಸಂಖ್ಯೆ ನಮೂದಿಸಿ, ಮಾಧ್ಯಮ, ನಿಮ್ಮ ಧರ್ಮ ಮತ್ತು ಮಾತೃ ಭಾಷೆ ಆಯ್ಕೆ ಮಾಡಿಕೊಳ್ಳಿ. ನಂತರ Select School ಕ್ಲಿಕ್ ಮಾಡಿ. ನಂತರ ನೆರೆಹೊರೆಯ ಶಾಲಾ ಪಟ್ಟಿ ತೆರೆದುಕೊಳ್ಳುತ್ತದೆ. ಆದ್ಯತೆಯ ಕ್ರಮ ಸಂಖ್ಯೆ ನೀಡಿ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಿ. ನಂತರ ಲಿಸ್ಟ್–2 ಬಟನ್ ಕ್ಲಿಕ್ ಮಾಡಿ. ಅದರಲ್ಲಿನ ಶಾಲೆಗಳಿಗೆ ಕ್ರಮ ಸಂಖ್ಯೆ ಒಂದರಿಂದ ಆದ್ಯತೆ ನಮೂದಿಸಿ. ನಂತರ ಪರದೆಯ ಮೇಲಿನ ಎಡಭಾಗದಲ್ಲಿ ಇರುವ Back ಬಟನ್ ಕ್ಲಿಕ್ ಮಾಡಿ ಆಯ್ಕೆ ಮಾಡಿಕೊಂಡಿರುವ ಶಾಲೆಗಳನ್ನು ಖಾತರಿ ಪಡಿಸಿಕೊಂಡ ನಂತರ ಬಟನ್ ಒತ್ತಿ. ಮುಂದಿನ ಪುಟ ತೆರೆದುಕೊಳ್ಳುತ್ತದೆ. ಅರ್ಜಿ ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆ ನಮೂದಿಸಿ. Print Acknowledgment

Submit